**2020** ಡಿಸೆಂಬರ್ 8ರಂದು ಒಂದು ವಿಶಿಷ್ಟ ಸುದ್ದಿ ಕಠ್ಮಂಡುವಿನಿಂದ ಜಗತ್ತಿಗೆ ಬಿತ್ತರವಾಯಿತು. ಅದು ಕೂಡ ಜಾಲಗೋಷ್ಠಿಯಲ್ಲಿ. ಚೀನಾದ ವಿದೇಶಾಂಗ ಸಚಿವ ವಾಂಗ್‌ಯೀ ಮತ್ತು ನೇಪಾಳದ ವಿದೇಶಾಂಗ ಸಚಿವ ಪ್ರದೀಪ್ ಕುಮಾರ್ ದೊಡ್ಡದೇನನ್ನೋ ಘೋಷಣೆ ಮಾಡಲು ಸಿದ್ಧರಾಗಿದ್ದರು. ಅವರ ತಯಾರಿ ಮತ್ತು ಗಂಭೀರತೆ ನೋಡಿದ್ದರೆ ಕೋವಿಡ್–19ರ ಬಗ್ಗೆ ಜಂಟಿಯಾಗಿ ಲಸಿಕೆ ತಯಾರು ಮಾಡಿ ಜಗತ್ತನ್ನು ಅಚ್ಚರಿಗೆ ದೂಡುತ್ತಾರೋ ಎಂಬಂತಿತ್ತು. ಅಥವಾ ಚೀನಾ ಮತ್ತು ನೇಪಾಳದ ನಡುವೆ ಇನ್ನೆಂಥದೋ ಬಹು ದೊಡ್ಡ ಯೋಜನೆಗೆ ಸಹಿ ಹಾಕಬಹುದೋ ಎಂದು ಕೂಡ ಅನುಮಾನ ತಳೆಯುವಂತಿತ್ತು. ಆದರೆ ಅದೇನೂ ಆಗಲಿಲ್ಲ. ಅಲ್ಲಿ ಘೋಷಣೆ ಮಾಡಿದ್ದಿಷ್ಟು: 'ಹಿಮಾಲಯದ ಎವರೆಸ್ಟ್ ಶಿಖರದ ಈಗಿನ ನಿಜವಾದ ಎತ್ತರವನ್ನು ನಾವೀಗ ಘೋಷಿಸುತ್ತಿದ್ದೇವೆ. ಜಗತ್ತು ತಿಳಿದಂತೆ ಶಿಖರದ ಎತ್ತರ 8,848 ಮೀಟರ್ ಅಲ್ಲ, ಅದಕ್ಕೆ ಇನ್ನೂ 86 ಸೆಂಟಿಮೀಟರ್ ಸೇರುತ್ತದೆ' ಎಂದು ಹೇಳಿ ಅಧಿಕೃತ ಪತ್ರವನ್ನು ಬದಲಾಯಿಸಿಕೊಂಡಾಗ ಒಂದರ್ಥದಲ್ಲಿ ಅದು ಹೊಸ ಸುದ್ದಿಯೇ. ಆದರೆ ಜನಸಾಮಾನ್ಯರಿಗೆ 'ಇದು ಯಾವ ಸೀಮೆ' ಘೋಷಣೆ ಎನ್ನಿಸಿದ್ದೂ ಉಂಟು. ಏಕೆಂದರೆ ಬರಿ 86 ಸೆಂ.ಮೀ. ಹೆಚ್ಚುವರಿ ಎತ್ತರ ಎಂದರೆ ಅದು ಬ್ರೇಕಿಂಗ್ ಸುದ್ದಿ ಹೇಗಾಗುತ್ತದೆ? ಅದರಿಂದ ಯಾರಿಗೆ ಲಾಭ? ವಾಸ್ತವವಾಗಿ ಪರ್ವತಾರೋಹಿಗಳಿಗೆ ಇದೇನೂ ದೊಡ್ಡ ಅಂಕೆ ಸಂಖ್ಯೆಯೇ ಅಲ್ಲ. ಒಂದು ಹೆಜ್ಜೆ ಮೇಲಿಟ್ಟರಾಯಿತು. ಆದರೆ ಈ ಸುದ್ದಿಗೆ ಬೇರೆಯದೇ ಆದ ಮಹತ್ವವಿತ್ತು.

ಬ್ರಿಟಿಷರು ಸ್ಥಾಪಿಸಿದ್ದ 'ಸರ್ವೇ ಆಫ್ ಇಂಡಿಯಾ'ದ ಪರಿಣತರು ತ್ರಿಕೋನ ವಿಧಾನದಿಂದ ದೂರದ ಬಿಹಾರದ ಮೈದಾನದಿಂದಲೇ ಅಳೆದು ಎವರೆಸ್ಟ್ ಶಿಖರ 8,848 ಮೀಟರ್ ಎತ್ತರವಿದೆ ಎಂದು ಘೋಷಿಸಿದ್ದರು. ಅದು ಅಧಿಕೃತ ಎತ್ತರ ಎಂದು ಜಗತ್ತೇ ಪರಿಭಾವಿಸಿತ್ತು. ಹಾಗೆ ನೋಡಿದರೆ ಭಾರತದ ಈ ಸಾಧನೆಯನ್ನು ಮಣ್ಣುಮುಕ್ಕಿಸಬೇಕೆಂಬುದು ನೇಪಾಳದ ಅಥವಾ ಚೀನಾದ ಗುರಿಯಾಗಿರಲಿಲ್ಲ. ಬದಲು ಆ ಎರಡೂ ದೇಶಗಳು ಇತ್ತೀಚೆಗೆ ಪರಸ್ಪರ ಹತ್ತಿರವಾಗಿವೆ. ಇನ್ನೊಂದರ್ಥದಲ್ಲಿ ಹೇಳುವುದಾದರೆ, ಚೀನಾ ಬೀಸಿದ ಆರ್ಥಿಕ ಬಲೆಗೆ ನೇಪಾಳ ಸಿಕ್ಕಿಹಾಕಿಕೊಂಡು ಒದ್ದಾಡುತ್ತಿದೆ. ಈ ದೇಶಕ್ಕೆ ಎಷ್ಟು ಮೊಂಡುಧೈರ್ಯ ಬಂದಿದೆಯೆಂದರೆ, ಭಾರತ ಭಾಗದ ಗಡಿರೇಖೆಯನ್ನೇ ಬದಲಾಯಿಸಿ, ತನ್ನ ಭೌಗೋಳಿಕ ಮಿತಿಯನ್ನು ವಿಸ್ತರಿಸಿಕೊಳ್ಳುವ ಮಟ್ಟಕ್ಕೆ ಹೋಗಿತ್ತು.

ಡಿಸೆಂಬರ್ 8ರ ಗೋಷ್ಠಿಯ ಹಿಂದೆ ಈ ಎರಡೂ ದೇಶಗಳು ಮಾಡಿದ ಸಾಹಸದ ರೋಚಕ ಗಾಥೆಯೇ ಇದೆ. 2019ರ ಅಕ್ಟೋಬರ್ ತಿಂಗಳಲ್ಲಿ ಎವರೆಸ್ಟ್ ಶಿಖರದ ಎತ್ತರದ ಬಗ್ಗೆ ಸಮೀಕ್ಷೆ ಮಾಡಲು ಎರಡೂ ದೇಶಗಳು ಒಪ್ಪಂದಮಾಡಿಕೊಂಡಿದ್ದವು. 2015ರಲ್ಲೇ ಚೀನಾ ಸ್ವತಂತ್ರವಾಗಿ ಎವರೆಸ್ಟ್ ಶಿಖರದ ಎತ್ತರವನ್ನು ಅಳೆಯಲು ತಂಡವನ್ನೇ ರವಾನಿಸಿತ್ತು. ಆ ತಂಡ ಮಾಡಿದ ಲೆಕ್ಕಾಚಾರದಂತೆ ಶಿಖರದ ಎತ್ತರ 8,844.43 ಮೀಟರ್. ಅಂದರೆ ಜಗತ್ತು ಒಪ್ಪಿಕೊಂಡ ಅಳತೆಗಿಂತ 3.57 ಮೀಟರ್ ಕಡಿಮೆ. ಇದರಲ್ಲಿ ಏನೋ ಎಡವಟ್ಟಾಗಿದೆ ಎಂದು ಚೀನಾಕ್ಕೆ ಮನವರಿಕೆಯಾಯಿತು. ಆದರೆ ಆ ಸಿಕ್ಕನ್ನು ಬಿಡಿಸಲು ಆಗಲಿಲ್ಲ. ಎಲ್ಲ ಲೆಕ್ಕಾಚಾರವನ್ನು ಮತ್ತೆ ಮತ್ತೆ ಬಿಡಿಸಿದಾಗಲೂ ಅಳತೆಯಲ್ಲೇನೂ ಬದಲಾಗಲಿಲ್ಲ. ಕಳೆದ ವರ್ಷ ಚೀನಾದ ಕಡೆಯಿಂದ ಅಂದರೆ ಟಿಬೆಟ್ ಭಾಗದಿಂದ ಎವರೆಸ್ಟ್ ಶಿಖರ ಹತ್ತಲು ಪರ್ವತಾರೋಹಿಗಳಿಗೆ ಪರವಾನಗಿ ಕೊಡಲಿಲ್ಲ. ಏಕೆಂದರೆ ಕೋವಿಡ್–19 ಅಡ್ಡಬಂದಿತ್ತು. ಅದಕ್ಕೂ ಹಿಂದೆ ಅಂದರೆ 1975ರಲ್ಲಿ ಅದೇ ದೇಶ ಮಾಡಿದ ಅಳತೆ 8.848.11 ಮೀಟರ್. ಇಲ್ಲೂ ಲೆಕ್ಕಾಚಾರ ಕೈಕೊಟ್ಟಿತ್ತು. ಆ ದೇಶಕ್ಕೆ ತಾನು ಅಳವಡಿಸಿಕೊಂಡ ತಂತ್ರಜ್ಞಾನದ ಬಗ್ಗೆ ಅನುಮಾನ ಹುಟ್ಟಿತ್ತು. ಈ ಎರಡೂ ಲೆಕ್ಕಾಚಾರವನ್ನು ಕೈಬಿಟ್ಟು ಕಳೆದ ವರ್ಷದ ಮೇ ತಿಂಗಳಲ್ಲಿ ಕೋವಿಡ್–19ರ ದಾಂಧಲೆಯನ್ನು ಧಿಕ್ಕರಿಸಿ ಒಂದು ತಂಡ ಎವರೆಸ್ಟ್ ಶಿಖರವನ್ನು ಹತ್ತಿತು. ಶೃಂಗದಲ್ಲಿ ಭೌಗೋಳಿಕ ಸ್ಥಾನ ನಿರ್ಧಾರ ವ್ಯವಸ್ಥೆಯ (ಜಿ.ಪಿ.ಎಸ್.) ಲಾಭ ಪಡೆದು ಅಲ್ಲೊಂದು ರಿಸೀವರನ್ನು ಸ್ಥಾಪಿಸಿತು. ತನ್ನದೇ ಆದ 'ಬೆ ಡೋನ್' ಎಂಬ ಸಂಪರ್ಕ ಉಪಗ್ರಹಗಳನ್ನು ಬಳಸಿ ಅಕ್ಷಾಂಶ ರೇಖಾಂಶವನ್ನು ಖಚಿತಪಡಿಸಿಕೊಂಡಿತು. ಎಂದಿನಂತೆ ಎಲ್ಲ ದೇಶಗಳೂ ಮಾಡುವಂತೆ ಥಿಯೋಡಲೈಟ್ ಎಂಬ ಉಪಕರಣವನ್ನು ಬಳಸಿ ಎತ್ತರವನ್ನು ಖಚಿತಪಡಿಸಿಕೊಂಡಿತು.

ಯಾವುದೇ ದೇಶವಿರಲಿ, ಪರ್ವತಗಳನ್ನು ಅಳೆಯುವಾಗ ಒಂದು ಮೂಲಾಧಾರವನ್ನು ಪರಿಗಣಿಸಬೇಕಾಗುತ್ತದೆ. ಚೀನಾ, 'ಚೀನಾ ಸಮುದ್ರದ' ಮಟ್ಟವನ್ನೇ ಆಧಾರವಾಗಿಟ್ಟುಕೊಂಡಿತು. ಇಷ್ಟೆಲ್ಲ ಸಾಹಸ ಮಾಡಿದ ಮೇಲೆ ಪಡೆದ ಮಾಹಿತಿಯನ್ನು ಗೋಪ್ಯವಾಗಿಟ್ಟುಕೊಂಡಿತು. ಇತ್ತ ನೇಪಾಳ ಸರ್ಕಾರಕ್ಕೆ ಎವರೆಸ್ಟ್ ಶಿಖರದ ನಿಜವಾದ ಎತ್ತರ ಅಳೆದ ಕೀರ್ತಿ ತನ್ನದಾಗಬೇಕೆಂದು 2018ರಲ್ಲೇ ತನ್ನ ಆಯವ್ಯಯದಲ್ಲೇ 1.3 ದಶಲಕ್ಷ ಡಾಲರ್ ಈ ಸಮೀಕ್ಷೆಗಾಗಿ ತೆಗೆದಿರಿಸಿತ್ತು. 2019ರಲ್ಲಿ ಅದು ಒಂದು ತಂಡವನ್ನು ಆಗ್ನೇಯ ಏಣಿನ ಮೂಲಕ ಎವರೆಸ್ಟ್ ಶಿಖರ ತಲುಪಲು ಬೆನ್ನು ತಟ್ಟಿ ಕಳಿಸಿತು. ಆ ಸಮೀಕ್ಷೆಯಲ್ಲಿ ಚೀನಾಕ್ಕಿಂತ ನೇಪಾಳಿ ಮೋಜಣಿದಾರರ ಕೈ ಮೇಲಾಯಿತು. ಏಕೆಂದರೆ ಥಿಯೋಡಲೈಟ್ ಜೊತೆಗೆ ಲೇಸರ್ ತಂತ್ರಜ್ಞಾನ, ರಾಡಾರ್ ಬಳಸಿ ಶಿಖರದ ಶಿಲೆಯ ಮೇಲೆ ಎಷ್ಟು ಹಿಮ ಕೂತಿದೆ ಎನ್ನುವುದನ್ನು ಈ ಭೂಪರು ಅಳೆದುಬಿಟ್ಟರು. ಇದರ ಜೊತೆಗೆ ಹಿಂದೆ ನೇಪಾಳದ ಸರಹದ್ದಿನಲ್ಲಿ ಭಾರತ ಬಳಸಿದ ವೀಕ್ಷಣಾ ಕೇಂದ್ರಗಳನ್ನು ಬಳಸಿದ್ದರು. ನೇಪಾಳ ಕೂಡ ಚೀನಾದ ಚಾಳಿಯನ್ನೇ ಅನುಸರಿಸಿತು. ಅಂದರೆ, ತಾನು ಮಾಡಿದ್ದ ಶಿಖರದ ಅಳತೆಯನ್ನು ರಾಷ್ಟ್ರೀಯ ನಿಧಿಯೋ ಎಂಬಂತೆ ಗೋಪ್ಯವಾಗಿ


ಎವರೆಸ್ಟ್ ಶಿಖರ

